ಶ್ರೀ ಎಂ.ಪಿ. ವೆಂಕಟೇಶ್ : ನಿಮ್ಮ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಾರೆ, ನೀವೇಕೆ ಹೋಗುತ್ತಿದ್ದೀರಿ? ಇದು ಸರಿಯಿಲ್ಲ. ನೀವು ವಾಕೌಟ್ ಮಾಡಿದರೆ ಹೇಗೆ?

ಶ್ರೀ ಅಂಜನಮೂರ್ತಿ : ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು.....

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ವೆಂಕಟೇಶ್ : ಆ ಜನಾಂಗಕ್ಕೆ ತೊಂದರೆಯಾಗದ ರೀತಿ ನೀವು ಮುಖ್ಯಮಂತ್ರಿಗಳ ಮನವೊಲಿಸಿ.

ಶ್ರೀ ವಾಟಾಳ್ ನಾಗರಾಜ್ : ನೀವು ಸರ್ಕಾರದ ವಕ್ತಾರರೇ? ಆ ಜನಾಂಗದ ಪರಿಸ್ಥಿತಿ ಏನು ಎನ್ನುವುದು ನನಗೆ ಗೊತ್ತಿದೆ. ನನ್ನ ಕ್ಷೇತ್ರದಲ್ಲಿ ಅವರ ಪಾದಸೇವೆ ಮಾಡುತ್ತಿದ್ದೇವೆ ನಾವು. ಅವರ ಪರಿಸ್ಥಿತಿ ನನಗೆ ಗೊತ್ತಿದೆ.

ಉಪಾಧ್ಯಕ್ಷರು : ಅಂಜನಾಮೂರ್ತಿಯವರೇ, ಈ ಸಬ್ಜೆಕ್ಟ್ ನಿಮ್ಮದಲ್ಲ. ಇದು ಮಂಜುನಾಥ್‌ರವರು ಹೇಳಬೇಕಾಗಿರುವಂಥಾದ್ದು, ನೀವು ಕುಳಿತುಕೊಳ್ಳಿ.

ಶ್ರೀ ಅಂಜನಾಮೂರ್ತಿ : ನಮ್ಮ ಉತ್ತರವನ್ನು ಕೇಳುವಷ್ಟೂ ಸಂಯಮ ಇಲ್ಲವೆಂದರೆ, ವಾಟಾಳ್ ನಾಗರಾಜ್‌ರವರು ಸುಮ್ಮನೆ ಪ್ರಚಾರಕ್ಕೋಸ್ಕರ ಮಾತನಾಡುತ್ತಿದ್ದಾರೆ ಅಷ್ಟೇ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಸಭಾತ್ಯಾಗ ಮಾಡಿದರು)

ಡಾ: ಎಂ.ಸಿ.ಸುಧಾಕರ : ಮಾನ್ಯ ಉಪಾಧ್ಯಕ್ಷರೇ, ವಾಕೌಟ್ ಮಾಡುವವರು ಮಾಡಲಿ ಬಿಡಿ.

ಶ್ರೀ ಅಂಜನಾಮೂರ್ತಿ : ಅವರು ಕೇವಲ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ, ಅವರಿಗೆ ಆ ಜನಾಂಗದವರ ಬಗ್ಗೆ ನಿಜವಾಗಿ ಕಾಳಜಿ ಇಲ್ಲ ಎಂದು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಆಯಿತಲ್ಲಾ ಬಿಡಿ. ಈಗ ಮುಂದಕ್ಕೆ ಹೋಗೋಣ. ಈಗ ಎ.ಟಿ.ರಾಮಸ್ವಾಮಿಯವರು.

(ಆ) ವಿಷಯ: ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರವೇಶಾವಕಾಶವನ್ನು ವ್ಯಾಪಾರೀಕರಣ ಗೊಳಿಸಿರುವುದರಿಂದ, ಅರ್ಹ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೇ, ಹಲವಾರು ಖಾಸಗೀ ಶಿಕ್ಷಣ ಸಂಸ್ಥೆಗಳು ಪ್ರವೇಶಾವಕಾಶವನ್ನು ವ್ಯಾಪಾರೀಕರಣಗೊಳಿಸಿ, ಅರ್ಹ ಬಡ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನಿರಾಕರಿಸಿ, ಇಡೀ ಶಿಕ್ಷಣ ಕ್ಷೇತ್ರವನ್ನು ಕಲುಷಿತಗೊಳಿಸುತ್ತಿರುವ ಕೆಟ್ಟ ಪಿಡುಗಿನ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆಂದು ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಭಾರತದ ಸರ್ವೋಚ್ಚ ನ್ಯಾಯಾಲಯವು ಟಿ.ಎಂ.ಎ. ಪೈ Vs ಕರ್ನಾಟಕ ರಾಜ್ಯ ಪ್ರಕರಣದಲ್ಲಿ ಈ ಕೆಳಕಂಡಂತೆ ತಿಳಿಸಿದೆ:

"The right to establish an educational institution can be regulated; but such regulatory measures must, in general, be to ensure the maintenance of proper academic standards, atmosphere and infrastructure (including qualified staff) and the prevention of mal administration by those in chare of management. The fixing of a rigid fee structure, dictating the formation and composition of a governing body, compulsory nomination of teachers and staff for appointment or nominating students for admissions would be unacceptable restrictions." "We, however, wish to emphasize one point, and that is much as the occupation of education is, in a sense, regarded as charitable, while forbidding the charging of capitation fee and profiteering by the institution..... There can, however, be a reasonable revenue surplus, which may be generated by the educational institution for the purpose of development of education and expansion of the institution.''

ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ vs ಕರ್ನಾಟಕ ರಾಜ್ಯ ಪ್ರಕರಣದಲ್ಲಿ ನೀಡಲಾದ ಸ್ಪಷ್ಟೀಕರಣ ತೀರ್ಪಿನಲ್ಲಿ ಖಾಸಗಿ ಅನುದಾನರಹಿತ ವೃತ್ತಿಪರ ಕಾಲೇಜುಗಳಲ್ಲಿ ಶುಲ್ಕ ನಿಗದಿಗೆ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲು ಸೂಚಿಸುವ ಮೂಲಕ ಒಂದು ವ್ಯವಸ್ಥೆಯನ್ನು ಮಾಡಿದೆ. ಈ ಕಾಲೇಜುಗಳ ಆಡಳಿತ

ಮಂಡಳಿಗಳು ಇದು ಮತ್ತು ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ ತೀರ್ಪಿನಲ್ಲಿನ ಇತರ ಉಪವಾಕ್ಯಗಳು ಟಿ.ಎಂ.ಎ. ಪೈ ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗನುಗುಣವಾಗಿಲ್ಲವೆಂದು ಸರ್ವೋಚ್ಚ ನ್ಯಾಯಾಲಯದ ಮುಂದೆ ಈ ಕಾಲೇಜುಗಳ ಆಡಳಿತ ಮಂಡಳಿಗಳು ವಾದಿಸಿವೆ. ಟಿ.ಎಂ.ಎ. ಪೈ ಮತ್ತು ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ ಪ್ರಕರಣಗಳಲ್ಲಿನ ನ್ಯಾಯಾಲಯದ ತೀರ್ಪುಗಳ ಮಧ್ಯೆ ವಿರೋಧೋಕ್ತಿ ಇರುವುದು ನಿಜವೇ ಎಂಬ ಬಗ್ಗೆ ಪರಿಶೀಲಿಸಲು ಸರ್ವೋಚ್ಚ ನ್ಯಾಯಾಲಯದ 7 ನ್ಯಾಯಾಧೀಶರ ಒಂದು ಪೀಠವು ರಚಿಸಲ್ಪಟ್ಟಿದೆ. 7 ನ್ಯಾಯಾಧೀಶರ ಪೀಠದ ತೀರ್ಪನ್ನು ಕಾಯಲಾಗಿದೆ. 7 ನ್ಯಾಯಾಧೀಶರ ಪೀಠದ ಮುಂದಿರುವ ವಿಷಯವು ಖಾಸಗಿ ಅನುದಾನರಹಿತ ಕಾಲೇಜುಗಳಿಗೆ ಶುಲ್ಕಗಳು ಮತ್ತು ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ನಿಯಂತ್ರಿಸುವ ಸರ್ಕಾರದ ಪಾತ್ರ ಮತ್ತು ಈ ಸಂಸ್ಥೆಗಳ ಸ್ವಾಯತ್ತತೆ ಬಗ್ಗೆ ಇದೆ.

ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ವಿಧಿಸುವ ಶುಲ್ಕಗಳು ವಿದ್ಯಾರ್ಥಿಗಳ ಕೈಗೆಟಕುವಂತೆ ಇರುವುದನ್ನು ದೃಢಪಡಿಸಿಕೊಳ್ಳಲು ಸರ್ಕಾರವು ಕಾತುರವಾಗಿದೆ. ಆದರೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಮಾತ್ರ ಒಂದು ನೀತಿಯನ್ನು ರೂಪಿಸಬಹುದಾಗಿದೆ. ಇದರ ಜೊತೆಗೆ, ಈಗ ಎ.ಟಿ. ರಾಮಸ್ವಾಮಿಯವರು ಕೇಳಿರುವುದು ವಾಸ್ತವಾಂಶವಾಗಿದೆ. ಇಂಜಿನಿಯರಿಂಗ್ ಮತ್ತು ಮೆಡಿಕಲ್ ಸೀಟುಗಳ ವಿಷಯದಲ್ಲಿ ಕಳೆದ ವರ್ಷ ಸ್ವಲ್ಪ ಗೊಂದಲವಾಯಿತು. ಅನೇಕ ಬಡ ಮಕ್ಕಳಿಗೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಕ್ಕಲಿಲ್ಲ. ಅದಕ್ಕೋಸ್ಕರವಾಗಿ, ಈ ಸಾರಿ ನಾವು ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಬಡವರಿಗೆ ಮತ್ತು ಹಿಂದುಳಿದವರಿಗೆ ಸೀಟು ಸಿಗಲಿ ಎಂದು ಆರು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದೇವೆ. ಕಳೆದ ವರ್ಷ ತೊಂದರೆಯಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಉತ್ತರದ ಪ್ರತಿಯನ್ನೂ ರಾಮಸ್ವಾಮಿಯವರಿಗೆ ಕೊಟ್ಟಿದ್ದೇನೆ. ಈ ವರ್ಷ, ಅವರಿಗೆ ತೊಂದರೆಯಾಗದ ರೀತಿಯಲ್ಲಿ, ಗೊಂದಲವಾಗದ ರೀತಿಯಲ್ಲಿ ಮಾಡಲು ಸರ್ವ ಪ್ರಯತ್ನ ಮಾಡುತ್ತೇವೆಂದು ತಮ್ಮ ಮೂಲಕ ತಿಳಿಸುತ್ತಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ನಾನು ಬರೀ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳದ್ದನ್ನು ಮಾತ್ರ ಪ್ರಸ್ತಾಪ ಮಾಡುತ್ತಿಲ್ಲ. ಎಲ್.ಕೆ.ಜಿ.ಯಿಂದ ಹಿಡಿದು ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದ ಪ್ರವೇಶಾವಕಾಶಕ್ಕೆ ಸಂಬಂಧಿಸಿದ

ಹಾಗೆ ನಾನು ಗಮನವನ್ನು ಸೆಳೆದಿದ್ದೇನೆ. ಇವತ್ತು ಶಿಕ್ಷಣ ಸಂಸ್ಥೆಗಳು ಸರ್ಕಾರದ್ದಾಗಲೀ ಅಥವಾ ಟ್ರಸ್ಟ್‌ಗಳನ್ನು ಮಾಡಿಕೊಂಡು ನಡೆಸುವುದಾಗಲೀ, education to the poor people ಎಂದೇನು ಆಗಬೇಕಾಗಿತ್ತು, ಅದು education to the poor ಎಂದು ಆಗಿಲ್ಲ, education to the rich. ಆಗುತ್ತಿದೆ. ಆ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ಸರ್ಕಾರಕ್ಕೂ ಕೂಡ ಗೊತ್ತಿದೆ, ನಮ್ಮ ಹಿರಿಯ ಸಚಿವರಾದ ಶ್ರೀ ಮಂಜುನಾಥರವರ ಗಮನದಲ್ಲಿ ಕೂಡ ಇದೆ. ಶಿಕ್ಷಣ ಎನ್ನತಕ್ಕಂಥದ್ದು ಈ ಖಾಸಗಿ trust ಗಳೆಂದು ಏನು ರಚನೆ ಮಾಡಿಕೊಂಡಿದ್ದಾರೆ ಅದು ಸಂಪೂರ್ಣ ವ್ಯಾಪಾರೀಕರಣವಾಗಿದೆ Trust ಗಳನ್ನು ಏನು ಸ್ಥಾಪನೆ ಮಾಡಿಕೊಂಡಿದ್ದಾರೆ. ಆ Trust ಗಳಿಗೆ ಕಾಯಿದೆ ಇದೆ. ಆ ಕಾಯಿದೆ ಸಂಪೂರ್ಣವಾಗಿ ದುರುಪಯೋಗವಾಗುತ್ತಿದೆ. ಈಗ Trust ಗಳನ್ನು ರಚನೆ ಮಾಡಿಕೊಳ್ಳಲಿಕ್ಕೆ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ, ಸರ್ಕಾರದ ಭೂಮಿ ಕೊಟ್ಟಿದ್ದಾರೆ. ಕೆಲವು ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದ ಅನುದಾನವನ್ನು ಸಹ ಕೊಟ್ಟಿದ್ದಾರೆ. ವಿವಿಧ ಸೌಲಭ್ಯಗಳನ್ನು ಸಹ ಸರ್ಕಾರ ಅವರಿಗೆ ಒದಗಿಸಿಕೊಟ್ಟಿದೆ. ಆದರೆ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶಾವಕಾಶವನ್ನು ಒದಗಿಸುತ್ತಿಲ್ಲ. ಭಾರೀ ವಂತಿಗೆ ನೀಡತಕ್ಕಂಥ ಹಣವಂತರ ಮಕ್ಕಳಿಗೆ ಅಲ್ಲಿ ಪ್ರವೇಶಾವಕಾಶ ದೊರೆಯುತ್ತಿರುವುದು ತಮಗೆ ಗೊತ್ತಿದೆ. ಕೇಳಿದಷ್ಟು ಹಣ ಕೊಟ್ಟರೆ seat ಸಿಗುತ್ತದೆ, ಹಣ ಕೊಡದಿದ್ದರೆ seat ಸಿಗುವುದಿಲ್ಲ. ರೈತರ ಮಕ್ಕಳು, ಕಾರ್ಮಿಕರ ಮಕ್ಕಳು, ಶೋಷಿತ ವರ್ಗದವರ ಮಕ್ಕಳು ವಂತಿಗೆ ಕೊಟ್ಟು ಆ ಶಾಲೆಗಳಿಗೆ ಸೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು 20 ಲಕ್ಷ, 25 ಲಕ್ಷ ರೂಪಾಯಿಗಳನ್ನು ಮೆಡಿಕಲ್ ಓದುವ ಸಲುವಾಗಿ ಕೊಡಬೇಕು, L.K.G. ಓದುವುದಕ್ಕೆ 10 ಸಾವಿರ ರೂ. 15 ಸಾವಿರ ರೂಪಾಯಿಗಳನ್ನು ಕೊಡಬೇಕು. ಇಷ್ಟು ಹಣವನ್ನು ಬಡವರು ಹೇಗೆ ಕೊಡುತ್ತಾರೆ, ರೈತರು ಹೇಗೆ ಕೊಡುತ್ತಾರೆ? ಯಾರು ಲೂಟಿ ಮಾಡುತ್ತಾರೆ, ಅವರು ಆ ಹಣವನ್ನು ಕೊಟ್ಟು ಪ್ರವೇಶಾವಕಾಶವನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಅಂದರೆ ಲೂಟಿ ಮಾಡಲಿಕ್ಕೆ, ಭ್ರಷ್ಟಾಚಾರ ಮಾಡಲಿಕ್ಕೆ ಅವಕಾಶವನ್ನು ಪರೋಕ್ಷವಾಗಿ, ಪ್ರತ್ಯಕ್ಷವಾಗಿ ಸರ್ಕಾರವೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತಿದೆ ಎನ್ನುವ ಮಾತನ್ನು ಹೇಳಿ, ಆ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. Trust ಗಳು ನೋಂದಣಿ ಆಗಿವೆ. ಆ ಎಲ್ಲಾ Trust ಗಳೂ ಕೂಡ ಪ್ರತೀ ವರ್ಷ renew

ಮಾಡಿಕೊಳ್ಳಬೇಕು. ಅವರು ಪ್ರತೀ ವರ್ಷ ನವೀಕರಣ ಮಾಡಿಸಿ ಕೊಳ್ಳುತ್ತಿದ್ದಾರೆಯೇ? ಮಾಡಿಸಿ ಕೊಳ್ಳದಿದ್ದರೆ ಏಕೆ ಮಾಡಿಸಿಕೊಳ್ಳುತ್ತಿಲ್ಲ? ಆ Trustಗಳ ಲೆಕ್ಕಪತ್ರಗಳನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆಯೇ? ಮಾಡದಿದ್ದರೆ ಏಕೆ ಮಾಡುತ್ತಿಲ್ಲ? ಅವರು ಕಾನೂನಿಗಿಂತ ಸಂವಿಧಾನಕ್ಕಿಂತ ಮೇಲಿದ್ದಾರೆಯೇ? ದಯಮಾಡಿ ನಮ್ಮ ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಲಿ. ಹೀಗಾಗಿಯೇ ಅವರು ಅಕ್ರಮವಾಗಿ ಹಣ ಗಳಿಕೆ ಮಾಡಲಿಕ್ಕೆ ಸಾಧ್ಯತೆ ಆಗುತ್ತಿದೆ. ಈ Trust ಗಳ ಮೇಲೆ ಒಂದು ತನಿಖೆ ಮಾಡಿಸಲಿ. ಸರ್ಕಾರಕ್ಕೆ ಆ ಒಂದು Political will ಇದ್ದರೆ ರಾಜಕೀಯ ಇಚ್ಛಾಶಕ್ತಿ ಇದ್ದರೆ, ನಾನು ಎಲ್ಲಾ Trust ಗಳಿಗೆ ಸಾರಾಸಗಟಾಗಿ ಆರೋಪ ಮಾಡುತ್ತಿಲ್ಲ. ಕೆಲವು Trust ಗಳು ಉತ್ತಮವಾಗಿ ಕೆಲಸಮಾಡುತ್ತಿವೆ. ವಿದ್ಯಾದಾನ ಮಾಡುತ್ತಿವೆ. ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಬಹುತೇಕ Trust ಗಳು ಅವು ಪ್ರಾರಂಭವಾದಾಗ ಅವರಿಗೆ ಏನು ಆಸ್ತಿ ಇತ್ತು? ಅವರ ವಹಿವಾಟು ಏನಿತ್ತು? ಈ education institution ಅನ್ನು ಆ Trust ಹೆಸರಿನಲ್ಲಿ ಮಾಡಿಕೊಂಡ ಮೇಲೆ ಅವರಿಗೆ ಎಷ್ಟು ಆಸ್ತಿ ಆಯಿತು? ಅದು ಎಲ್ಲಿಂದ ಬಂತು? ಎನ್ನುವಂಥ ಒಂದು ತನಿಖೆಯನ್ನು ಪ್ರಾಥಮಿಕವಾಗಿ ನೀವು ಮಾಡಿಸಿ. ಆಗ ಈ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಹಣವನ್ನು ಹೇಗೆ ಲೂಟಿ ಮಾಡುತ್ತಿದ್ದಾರೆಂದು ಸರ್ಕಾರಕ್ಕೆ ಗೊತ್ತಾಗುತ್ತದೆ. ಆ ದಿಕ್ಕಿನಲ್ಲಿ capitation lobby ಜೊತೆ ನೀವು ಶಾಮೀಲಾಗಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಆದರೆ ಸರ್ಕಾರ ಎಷ್ಟು ಚುರುಕುತನದಿಂದ ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ಏಕೆಂದರೆ ಇನ್ನು ಮುಂದೆ L.K.G.,U.K.G.ಗೆ ಪ್ರಾಥಮಿಕ ಶಾಲೆಗೆ, High School ಗೆ ಮತ್ತು ಕಾಲೇಜುಗಳಿಗೂ ಕೂಡ ಪ್ರವೇಶಾವಕಾಶ ಪ್ರಾರಂಭವಾಗುತ್ತಿದೆ. ಅದು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಪ್ರವೇಶಾವಕಾಶಕ್ಕೆ ಏನಾದರೊಂದು ನೀತಿಯನ್ನು ನಿರೂಪಣೆ ಮಾಡಿ ಬಡ ಮಕ್ಕಳಿಗೆ, ಅರ್ಹ ಮಕ್ಕಳಿಗೆ ಕೂಡ ಅಲ್ಲಿ ಪ್ರವೇಶಾವಕಾಶ ದೊರಕಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಅವರು ಎರಡು ವಿಷಯ ಹೇಳಿದ್ದಾರೆ. ಒಂದನೆಯದು, ಖಾಸಗಿಯವರು ಎಲ್ಲಾ ಕಡೆಗೆ Trust ಮೂಲಕ education societies ಎಂದು ಮಾಡಿಕೊಂಡಿದ್ದಾರೆ.

ಆದರೆ ಅವರು ಪ್ರತೀ ವರ್ಷ ಸಂಸ್ಥೆಗಳನ್ನು renew ಮಾಡಿಸಿಕೊಳ್ಳಬೇಕು. Trust ಇದ್ದರೂ ಸಹ renew ಮಾಡಿಸಿಕೊಳ್ಳಬೇಕು. ಆದರೆ ಕೆಲವು ಕಡೆ ಮಾಡುತ್ತಿಲ್ಲವೆನ್ನುವುದು ನನ್ನ ಗಮನಕ್ಕೆ ಸಹ ಬಂದಿದೆ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಒಂದು ರೀತಿಯ ಅದೇಶ ಕೊಟ್ಟು ಇದನ್ನು ವಿಚಾರ ಮಾಡಿ ಎಂದು ಹೇಳುತ್ತೇನೆ. ಇನ್ನು ಈ L.K.G.ಮತ್ತು U.K.G.ಯ ಬಗ್ಗೆ ನನ್ನ ಮನಸ್ಸಿಗೇ ಬಹಳ ವ್ಯಥೆಯಾಗುತ್ತದೆ. ಅವರು 20 ಸಾವಿರ ರೂ.25 ಸಾವಿರ ರೂಪಾಯಿಗಳನ್ನು donation ಎಂದು ತೆಗೆದುಕೊಳ್ಳುತ್ತಾರೆ. Donation ತೆಗೆದುಕೊಳ್ಳಬಾರದೆಂಬ ಕಾಯಿದೆ ಇದೆ. ಕಳೆದ ವರ್ಷ ನಾವು ಆ ಕಾಯಿದೆ ಪ್ರಕಾರ case ಹಾಕಿದ್ದೆವು. ಒಂದು case ನಲ್ಲೂ ಶಿಕ್ಷೆ ಕೊಡಲಿಕ್ಕೆ ಆಗಲಿಲ್ಲ. ಏಕೆಂದರೆ, ಅಲ್ಲಿ ಹೋದಾಗ actually ಏನಪ್ಪಾ ದುಡ್ಡು ಕೊಟ್ಟಿದ್ದೀರಾ ಎಂದು ಕೇಳಿದರೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ಹೆಂಡತಿ ಕೊಟ್ಟಿದ್ದಾರೆ, ನನ್ನ ಗಂಡ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಗಂಡ ಕೊಡದೆ ಹೋದರೆ ತಮ್ಮ ಕೊಟ್ಟದ್ದಾರೆ ಎಂದು ಹೇಳುತ್ತಾರೆ. ಈ ರೀತಿಯಲ್ಲಿ evidence ಇಲ್ಲದೇ ಹೋದರೆ ಏನು Case ಹಾಕುವುದು? ಈ ವಿಷಯದಲ್ಲಿ ಪಾಪ, ಶ್ರೀ ಗೋವಿಂದೇಗೌಡರು ಬಹಳ ಕಷ್ಟಪಟ್ಟರು. ಕೇಸುಗಳನ್ನು ಅವರು ಹಾಕಿದರು. ಆದರೆ ಒಂದು Case ನಲ್ಲೂ ಶಿಕ್ಷೆ ಆಗಿಲ್ಲ. ಅದಕ್ಕೆ ಜನ ಸಹಕರಿಸದೇ ಹೋದರೆ ಇದು ಆಗುವುದಿಲ್ಲ. ಈಗ ಏನಾಗಿದೆ ಎಂದರೆ ಅವರು ಕೇಳಿದಾಗ ಇವರು ಕೊಡುತ್ತಾರೆ, ಆದರೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಈ ರೀತಿ ಸಮಾಜದಲ್ಲಿ ಜನರು ಇವತ್ತಿನ ದಿವಸದಲ್ಲಿ ಸಹಕರಿಸದೇ ಇದ್ದರೆ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಅದೇ ರೀತಿಯಲ್ಲಿ ಇವತ್ತು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾನು ಮಾತನಾಡಿದೆ. ನಿಜ ನಾನು ಹೇಳುತ್ತೇನೆ. ಈ fee structure ಬಗ್ಗೆ Supreme Court Case ಗಳು, ಟಿ.ಎಂ.ಎ. ಪೈ ಕೇಸ್ ಆಯಿತು, ಇನ್ನೊಂದು ಕೇಸ್ ಹಾಕಿ ಹೀಗೆ ಎರಡು ಕೇಸುಗಳಾದವು. ಆದ್ದರಿಂದ ಸ್ಪಷ್ಟವಾಗಿ ಇವತ್ತಿನ ದಿವಸ ಏನಾಗುತ್ತದೆ, ಅವರ ಅದೇಶದ ಪ್ರಕಾರ High Court ನಲ್ಲಿ ಇವೆಲ್ಲಾ ಆಗಿ ಹೋಗಿ ಸರ್ಕಾರ with the consultation of the High Court ಒಂದು committee ಮಾಡಿದೆ. ಅವರು fee structure ಕೊಟ್ಟರು. ಅವರು ಕೊಟ್ಟರೂ ಸಹ ಅದು ಕೂಡ ಇವತ್ತಿನ ದಿವಸ ಕಡಿಮೆ ಎಂದು ಖಾಸಗಿಯವರು

Supreme Courtಗೆ ಹೋದರು. ಆ case ಅಲ್ಲಿ pending ಇದೆ. ಅದು ಇನ್ನೂ ಇತ್ಯರ್ಥವಾಗಿಲ್ಲ. ಈಗೇನು aruguments ಆಗಿದೆ. ಬಹುತೇಕ judgement ಇಷ್ಟರಲ್ಲಿಯೇ ಆಗುತ್ತದೆ. ಅದು ಆದಮೇಲೆ ನಾವು ಮತ್ತೆ ಏನು ಮಾಡಬೇಕೆನ್ನುವುದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಅನೇಕ Trust ಗಳು renew ಮಾಡಿಸಿಕೊಂಡಿಲ್ಲವೆಂದು ಮಾನ್ಯ ಸಚಿವರು ಹೇಳಿದರು. Renew ಮಾಡಿಸಿಕೊಳ್ಳದಿದ್ದ ಮೇಲೆ ಸರ್ಕಾರ ಏನು ಮಾಡುತ್ತಿದೆ? ಏಕೆ ಕ್ರಮ ಕೈಗೊಂಡಿಲ್ಲ? ಏನಾದರೂ ಮುಲಾಜು ಇದೆಯೇ? ಯಾವ ಮುಲಾಜಿಗೋಸ್ಕರ ಬಿಟ್ಟುಕೊಂಡಿದ್ದಾರೆ? ಅದನ್ನು ಸ್ಪಷ್ಟಪಡಿಸಬೇಕು. ಅವರ ಲೆಕ್ಕಪತ್ರ ತಪಾಸಣೆ ಮಾಡಿಸಿಕೊಳ್ಳಬೇಕು. ಇವರ ಲೆಕ್ಕಪತ್ರ ತಪಾಸಣೆ ಮಾಡಲಿಕ್ಕೆ, ನೋಡಲಿಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲವೆ? ಆ ಲೆಕ್ಕಪತ್ರಗಳನ್ನು ಏಕೆ ನೋಡುತ್ತಿಲ್ಲ. ತಪಾಸಣೆ ಮಾಡುತ್ತಿಲ್ಲ? ಇದರಲ್ಲೂ ಏನಾದರೂ ಮುಲಾಜು ಇದೆಯೇ? ಕಾಯಿದೆ ಬದ್ಧವಾಗಿರತಕ್ಕಂಥ ಕಾನೂನಿನಡಿಯಲ್ಲಿ ಇವರು ಕ್ರಮ ಕೈಗೊಳ್ಳದೇ ಇದ್ದರೆ ನಾಳೆ Trust ಗಳು ಆಗಲೇ ಹೇಳಿದ ಹಾಗೆ education to the poor ಆಗುತ್ತಿಲ್ಲ education to the rich ಆಗುತ್ತಿದೆಯೆನ್ನಬೇಕಾಗುತ್ತದೆ. ಅದನ್ನು ನಿಗ್ರಹ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಕಡೆ ಅವರು ಏಕೆ ಗಮನ ಕೊಡುತ್ತಿಲ್ಲ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ನಾನು ಕೋರುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷರೆ, ಯಾವ ಮುಲಾಜು ಇಲ್ಲ. ಆದರೂ ಏನಾಗಿದೆಯೆಂದರೆ ಕೆಲವು ಸಾರಿ ಅದು ನಡೆದುಕೊಂಡು ಬಂದುಬಿಟ್ಟಿದೆ. ಕೆಲವು ವರ್ಷಗಳು ಹೀಗೆಯೇ ನಡೆದುಕೊಂಡು ಬಂದಿದೆ. ಈಗ ತಾವು ಹೇಳಿದ ಪ್ರಕಾರ ಇವತ್ತಿನ ದಿವಸ ನಾನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ತಮ್ಮ ಮೂಲಕ ಆಶ್ವಾಸನೆ ಕೊಡುತ್ತಿದ್ದೇನೆ. ಇವತ್ತಿನ ದಿವಸ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಅವರು renew ಮಾಡಿಸಿಕೊಳ್ಳದೇ ಇದ್ದರೆ ಅಥವಾ ಅನುದಾನ ಏನಾದರೂ ಪಡೆಯುತ್ತಿದ್ದರೆ ಅನುದಾನ ನಿಲ್ಲಿಸಿಬಿಡುತ್ತೇವೆ. ಅನುದಾನ ಪಡೆಯದೇ ಇದ್ದರೆ ಅಂಥ ಒಂದು education societies ಏನಿವೆ, ಅವರು ಪ್ರತೀ ವರ್ಷ General Body Meeting ಮಾಡಬೇಕು, ನವೀಕರಣ ಮಾಡಬೇಕು, ಅಂಥವು ಏನಾದರೂ ನವೀಕರಣ ಮಾಡದೇ ಇದ್ದರೆ, ಲೆಕ್ಕಪತ್ರಗಳನ್ನು ಸಹ ಅವರು ಮಾಡಿರಬೇಕು, ಆ ಲೆಕ್ಕಪತ್ರಗಳನ್ನು ಸಹ ತಪಾಸಣೆ ಮಾಡಿಸುವುದಕ್ಕೂ

ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ. ಅದು ಆಗದೇ ಇದ್ದರೆ ಅದು ಮಾಡದಿದ್ದರೆ ನಾವು ಅವರಿಗೆ ಏನು ಅನುದಾನ ಕೊಡುತ್ತೇವೆ ಅದನ್ನು ನಿಲ್ಲಿಸುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಸಚಿವರು ಹೇಳಿದ ಪ್ರಕಾರ 'ನಮಗೆ witness ಇಲ್ಲ, ಯಾರನ್ನು ಹೋಗಿ ಕೇಳಿದರೂ ಅವರು ಸಾಕ್ಷಿ ಹೇಳುವುದಿಲ್ಲ' ಎಂದು ಹೇಳಿದರು. ಉದಾಹರಣೆಗೆ ಒಂದು ವಿಚಾರವನ್ನು ಹೇಳುತ್ತೇನೆ. Trust ಗಳವರು ಏನು ಮಾಡುತ್ತಾರೆಂದರೆ,... ನಮಗೆ witness ಇಲ್ಲ. ಹಾಗಾಗಿ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದಿರಿ. Trust ನಲ್ಲಿ suspend ಮಾಡಿಬಿಡುತ್ತಾರೆ ಅವನು court ಗೆ ಹೋಗುತ್ತಾನೆ. 10 ವರ್ಷ ಆದ ಮೇಲೆ court ನವರು finalize ಮಾಡುತ್ತಾರೆ. 'ಇವರದ್ದು ತಪ್ಪೇನೂ ಇಲ್ಲ, ಇವರು ಸಂಬಳ ಇತ್ಯಾದಿ ಏನೆಲ್ಲಾ ಬರಬೇಕು ಅದನ್ನು ಮಾಡಿಕೊಡಬೇಕು' ಎಂದು ಹೇಳಿದರೆ, ಆ Management ನವರು ಅವನಿಗೆ 10 ಲಕ್ಷವೊ, 12ಲಕ್ಷ ರೂಪಾಯಿಗಳನ್ನೋ ಪೂರ್ತಿ ಕೊಡುತ್ತಾನೆ. ಆದರೆ ಇಷ್ಟು ಹಣವನ್ನು ಎಲ್ಲಿಂದ ಕೊಡುತ್ತಾನೆ? Students money, ಏನು fee collect ಮಾಡಿ ಆ Trust ನಲ್ಲಿ ಇಟ್ಟಿದ್ದಾನೋ ಆ ದುಡ್ಡನ್ನು ಹಾಳು ಮಾಡುತ್ತಿದ್ದಾರೆ. ಆ ಹಣ ಯಾರಿಗೆ ಉಪಯೋಗವಾಗ ಬೇಕಿತ್ತೆಂದರೆ ಅದು ಮಕ್ಕಳಿಗೆ ಉಪಯೋಗವಾಗಬೇಕಾಗಿತ್ತು. Students ಗೆ benefit ಆಗಬೇಕಾಗಿರುವಂಥದ್ದು ಅಂಥ mis-management ನವರನ್ನೇ with evidence ಇದ್ದರೂ ತಾವು grant-in-aid ಕೊಟ್ಟುಕೊಂಡು ಕುಳಿತಿದ್ದರೆ ಇಂಥ management ಗಳಿಗೆಲ್ಲಾ ಸಹಾಯ ಮಾಡುತ್ತಿದ್ದೀರಿ ಎಂದು ಅರ್ಥವಲ್ಲವೇ? ಈ ಬಗ್ಗೆ ತಾವೇ ಚಿಂತನೆ ಮಾಡಿ ಹೇಳಿ ನಮಗೆ evidence ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಇಷ್ಟೂ evidence ಇದೆ, ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ?

ಶ್ರೀ ಡಿ. ಮಂಜುನಾಥ್ : ಬರೆದು ಕಳುಹಿಸಿ. ಕ್ರಮ.....

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ 6 ಮೆಡಿಕಲ್ ಕಾಲೇಜುಗಳ ಪ್ರಾರಂಭ ಮಾಡುವುದಕ್ಕೆ ಅನುಮತಿ ನೀಡಿದ್ದೀರಿ. ಅದಕ್ಕೆ ನಾನು ನಿಮಗೆ ಅಭಾರಿಯಾಗಿದ್ದೇನೆ. ಆದರೆ ಈಗಿರತಕ್ಕಂಥ ತಮ್ಮ Government

Medical College ಗಳು de-recognize ಆಗಲಿಕ್ಕೆ ಬಂದಿರತಕ್ಕಂಥದ್ದು ಸುದ್ಧಿ ತಮಗೆ ಗೊತ್ತಿದೆ. ಅಲ್ಲಿರತಕ್ಕಂಥ intake strength 200 ಇದ್ದದ್ದು 100 ಕ್ಕೆ ಇಳಿದಿದೆ. ಕೆಲವು ಕಡೆ 50 ಕ್ಕೂ ಇಳಿದಿರತಕ್ಕಂಥ ಉದಾಹರಣೆ ತಮಗೆ ಗೊತ್ತಿದೆ. ನೀವು ಯಾವ ರೀತಿ ಅವುಗಳನ್ನು ನಿರ್ವಹಣೆ ಮಾಡುತ್ತಿದ್ದೀರಿ ಎನ್ನತಕ್ಕಂಥದ್ದರ ಆತ್ಮಾವಲೋಕನವನ್ನು ಇವತ್ತು ನೀವು ಮಾಡಿಕೊಳ್ಳಬೇಕಾಗುತ್ತದೆ. ಹೊಸ ಕಾಲೇಜು ತೆಗೆಯುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ತೆಗೆದಿರತಕ್ಕಂಥ ಕಾಲೇಜುಗಳಲ್ಲಿ intake strength ಕಡಿಮೆ ಆಗುತ್ತಿರವುದಕ್ಕೆ ಸರ್ಕಾರದಲ್ಲಿ ಎಲ್ಲಾದರೂ ಲೋಪದೋಷ ಇದೆಯೆನ್ನತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ, ಎಂದು ನಾನು ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಎರಡನೇಯದು, ಈ Trust Actನ್ನು ಈಗ ನೀವು ನೋಡಿದಿರಿ co-operative Actನಲ್ಲಿ ಆ Trust Member ಮಾತ್ರ ಕೇಳಲಿಕ್ಕೆ ಅವಕಾಶವಿದೆ. ಆ ಟ್ರಸ್ಟ್ ಮೆಂಬರ್ ಬಿಟ್ಟು ಯಾರಾದರೂ ಪಬ್ಲಿಕ್ ಆ ಟ್ರಸ್ಟ್‌ನಲ್ಲಿ ನಡೆಯುತ್ತಿರತಕ್ಕಂಥ ಲೆಕ್ಕ ಪತ್ರಗಳ ಪರಿಶೋಧನೆ ಬಗ್ಗೆ ಕೇಳಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ಅಂತ ಹೇಳಿ ತಮ್ಮ ಮುಖಾಂತರ ನಾನು ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅದಕ್ಕೆ ಹೇಳಬೇಕು ಸಾರ್. ಟ್ರಸ್ಟ್‌ಗಳೇನಾಗಿವೆ family trust ಗಳಾಗಿವೆ. They will be totally family members. ಅಪ್ಪ ಇರುತ್ತಾನೆ, ಮಗ ಇರುತ್ತಾನೆ, ಮೊಮ್ಮಗ ಇರುತ್ತಾನೆ. There won't be any public in the trust. That they have to specify. ನಾನು ಅದನ್ನೇ ಕೇಳಬೇಕೂಂತ ಇರುವುದು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್ ಇದೆ.

ಉಪಾಧ್ಯಕ್ಷರು : ಬೇಡ, ಬೇಡ, 1–2 ಕ್ಲಾರಿಫಿಕೇಷನ್ ಅಷ್ಟೇನೆ..... ಅವಕಾಶವಿಲ್ಲ.

(ಇ) **ವಿಷಯ : ಮುಧೋಳ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ 2004 ರಲ್ಲಿ ತೊಟ್ಟಿ ಕುಸಿದು ಮೃತಪಟ್ಟ ಮತ್ತು ಅಂಗವಿಕಲರಾದವರ ಕುಟುಂಬದವರಿಗೆ ಪರಿಹಾರ ನೀಡುವುದರ ಬಗ್ಗೆ.**